Regd No. M 1299 SATYAVADI Founded 1927

ಸತ್ಯವಾದಿ

ಸಂಪುಟ 26 ಸಂಖ್ಯೆ 9 ಸೋಮವಾರ 11—2—1943 | ಬಿಡಿಪ್ರತಿ 3 ಪೈ

ಸಾದರ ಸ್ವೀಕಾರ

ಶ್ರೀಮನ್ಮಹಾರಾಜರವರು ಕೈಕೊಂಡಿರುವ ಪ್ರವಾಸದಲ್ಲಿ ಇಲ್ಲೀವರೆಗೆ ಹೋಗಿರುವ ಸ್ಥಳಗಳಲ್ಲಿ ಅವರಿಗೆ ಅರ್ಪಿಸಿದ ಬಿನ್ನಪತ್ರಗಳ ಮತ್ತು ಅವರು ದಯಪಾಲಿಸಿದ ಉತ್ತರಗಳ ಪ್ರತಿಗಳು ಮೈಸೂರು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರ ಆಫೀಸ್ ಮೂಲಕ ನಮಗೆ ತಲಪಿರುವವು. ಅವುಗಳನ್ನು ಸಾಭಾರದಿಂದ ಸ್ವೀಕರಿಸುತ್ತೇವೆ.

ಪೋಲೀಸ್ ಪೆಡ್ಡಿಗೆ ಬೆಂಕಿ

ತಲಕಾಡು ಹೋಬಳಿ ಕಾವೇರಿಪುರ ಗ್ರಾಮದಲ್ಲಿ ಪೋಲೀಸ್ ಪೆಡ್ಡಿಗ ಸಂಜಯ್ಯನೆಂಬವನು ಬೆಂಕಿ ಹಚ್ಚಿದನೆಂದು ವರದಿ ಬಂದಿದೆ. ಟಿ. ನರಸೀಪುರದ ಪೋಲೀಸಿನವರು ತನಿಖೆ ನಡೆಸುತ್ತಿದ್ದಾರೆಂದು ತಿಳಿಯಬಂದಿದೆ.

For Invigorating Coffee & Tea
Sastry's Coffee Rooms
Chamarajapuram, Mysore

HOTEL PARADISE
D. Subbiah Road, Mysore
paovides you with comfortable and homely meals

ಮಹಾತ್ಮಾ ಗಾಂಧಿಯವರ ಉಪವಾಸ ವ್ರತ

ನಿನ್ನೆಯಿಂದ ಪ್ರಾರಂಭ — ೨೧ ದಿವಸಗಳು

ಗಾಂಧಿಜಿಯವರು ನಿನ್ನೆಯಿಂದ 21 ದಿವಸಗಳ ಉಪವಾಸವನ್ನು ಕೈಕೊಂಡಿರುವರು, ಈಗಿನ ಬಿಕ್ಕಟ್ಟು ಮತ್ತು ದೇಶದಲ್ಲಿ ಉಂಟಾದ ಅನಾಹುತಗಳಿಗೆ ಗಾಂಧಿಯವರೇ ಜವಾಬ್ದಾರರೆಂದು ವೈಸರಾಯರವರು ಗಾಂಧೀಜಿಯವರಿಗೆ ತಿಳಿಸಿದ್ದರು ಈ ಉಪವಾಸ ವಿಷಯದಲ್ಲಿ ಪಂಡಿತ್ ಮೋತಿಲಾಲರವರು ಕೇಂದ್ರ ಅಸೆಂಬ್ಲಿಯಲ್ಲಿ ಅಡ್ಜರ್ನ್‌ಮೆಂಟ್ ಮೋಷನ್ ತರುವವರಾಗಿದ್ದಾರೆ. ದೇಶದ ಎಲ್ಲಾ ಕಡೆಯಿಂದ ಗಾಂಧಿಜಿಯವರು ಉಪವಾಸ ನಿಲ್ಲಿಸುವಂತೆ ಮಾಡಲು ಇಂಡಿಯಾ ಸರಕಾರಕ್ಕೆ ಅರಿಕೆಗಳು ತಂತೀವ ಲೂಲಕ ಹೋಗುತ್ತಿವೆ ಮಹಾತ್ಮಾ ಗಾಂಧಿಯವರು ಏನೊಂದು ಪರತ್ತಿಲ್ಲದೆ ಬಿಡುಗಡೆ ಮಾಡಲ್ಪಟ್ಟು, ಅವರು ಉಪವಾಸ ವ್ರತವನ್ನು ನಿಲ್ಲಿಸುವಂತೆ ಇಂಡಿಯಾ ಸರಕಾರದವರು ಮಾಡಲೆಂದು ಕೋರುತ್ತೇವೆ.

ತಾಜಾಸಮಾಚಾರ

ರಷ್ಯಾ ಸೇನೆಯು ರೋಸ್ಟೋವ್ ಗೇನ್ ಬಳಿ ಜರ್ಮನ್ ಸೈನ್ಯವನ್ನು ಗುದ್ದಿ ಕೊಂಚು ಹಿಂದಕ್ಕೆ ತಳ್ಳುದ್ದಿದ್ದಾರೆ. ಖೈಲೆ ಗೊರಾಡರ್ ರಷ್ಯದರ ವಶವಾಯಿತು.

ಈಗ ಕೋಟ್ಯಾಧೀಶ್ವರರೆಲ್ಲರೂ ಸ್ವಿಡ್ಜರ್‌ಲ್ಯಾಂಡಿನಲ್ಲಿ ಸೇರಿಕೊಂಡಿರುತ್ತಾರೆ. ಇವರ ಸಂಖ್ಯೆಯು ಈಗ 800 ಕ್ಕೆ ಕಮ್ಮಿಯಿಲ್ಲ. ಇವರೆಲ್ಲರ ಲೆಕ್ಕವನ್ನೂ ಮಿಲಿಯ (ಹತ್ತು ಲಕ್ಷ) ರೂಪದಲ್ಲಿ ಲೇವಾದೇವಿ ನಡೆಸುತ್ತಾರೆ.

ಉತ್ತರ ಸಾಮಾಜಿಕ ಭಾವಪರಿಪೂರ್ಣವಾದ ಕಥೆ ಓದಲು ಪ್ರಾರಂಭಿಸಿದರೆ ಕಥೆ ಮುಗಿಸುವವರೆಗೂ ಊಟಕ್ಕೆ ಕೂಡ ಏಳಲು ಮನ ಸ್ಸಾಗುವದಿಲ್ಲ. ಬೆಲೆ 6 ಆಣೆ. ಪೋಸ್ಟೇಜು 1 ಆಣೆ. ಮುಂಗಡ ಕಳುಹಿಸಬೇಕು
ಸತ್ಯವಾದಿ ಆಫೀಸ್ ಮೈಸೂರು

ಶ್ರೀದೇವಿ ಆರ್ಟ್ಸ್
ಅಂದವಾದ ಬೋರ್ಡುಗಳು ಬರೆಯಲ್ಪಡುತ್ತವೆ, ಎಲ್ಲಾ ತರಹದ ಚಿತ್ರಕೆಲಸಗಳೂ ಮಾಡಲ್ಪಡುತ್ತವೆ ಸುಲಭ ದರಗಳು.
348 ಚಾಮರಾಜರೋಡ್, ಮೈಸೂರು

ಗಲ್ಲಿಗೇರಿಸುವುದು ನಿಂತಿತು

ಅಮೇರಿಕಾದಿಂದ ಒಬ್ಬ ಫೈಟರ್ ತನ್ನ ವಿಮಾನದಲ್ಲಿ ಒಂದು ನಾಯಿಯನ್ನು ಪೆಸಫಿಕ್ ದ್ವೀಪಕ್ಕೆ ತೆಗದುಕೊಂಡುಹೋದನು. ದಾರಿಯಲ್ಲಿ ಅವನಿಗೆ ಆಸ್ಟ್ರೇಲಿಯಾಕ್ಕೆ ಹೋಗಬೇಕೆಂದು ತಿಳಿಸಿದರು. ಆಸ್ಟ್ರೇಲಿಯಾದಲ್ಲಿ ಇಳಿದ ಕೂಡಲೇ ನಾಯಿಯನ್ನು ಕೊಲ್ಲಬೇಕಾಯಿತು. ಅಲ್ಲಿ ಪರದೇಶದ ನಾಯಿಗಳನ್ನು ಸೇರಿಸುವುದಿಲ್ಲ. ಈ ನಿಯಮವನ್ನು ಮುಖ್ಯ ಮಂತ್ರಿಗೆ ತಿಳಿಸಲಾಯಿತು. ಮಂತ್ರಿಯು ನಾಯಿಗೆ ಜೀವದಾನ ಮಾಡಿದನು.

ಹುಲ್ಲು ತಿನ್ನದ ಹಸುಗಳು

ಉತ್ತರ ಅರ್ಕಾಟು, ಸೇಲಂ ಡಿಸ್ಟ್ರಿಕ್ಟುಗಳಲ್ಲಿರುವ ಕಾಡುಗಳಲ್ಲಿ ಒಂದು ಜಾತಿಯ ಹಸುಗಳಿರುವವು. ಇವು ಹುಲ್ಲನ್ನು ತಿನ್ನುವುದಿಲ್ಲ ಕೆಲವು ಬಗೆಯ ಗೆಡ್ಡೆಗೆಣಸುಗಳನ್ನೂ, ರಂಬೆಗಳಲ್ಲಿನ ಎಲೆಗಳನ್ನೂ ತಿನ್ನುತ್ತವೆ ತೊಲಗದ್ದೆಗಳಲ್ಲಿ ಇವುಗಳನ್ನು ಸರಾಗವಾಗಿ ಬಿಡುತ್ತಾರೆ. ಬೆಳಸನ್ನು ಹಾಳುಮಾಡುವುದಿಲ್ಲ ಇವು ತಮ್ಮ ಆಹಾರಕ್ಕಾಗಿ ದಿನವೂ 10—15 ಮೈಲಿ ನಡೆದು ತಮಗೆ ಇಷ್ಟವಾದ ಗೆಡ್ಡೆ ಎಲೆಗಳನ್ನು ತಿಂದು ಹಿಂತಿರುಗುತ್ತವೆ ಇವಲ್ಲಿ ಕೆಲವು ದಿನಕ್ಕೆ ಒಂದು ಒಂದೂವರೆ ಸೇರು ಹಾಲನ್ನು ಕೊಡುತ್ತವೆ. ಈ ಹಾಲಿನಲ್ಲಿ ಸಿಹಿ ಹೆಚ್ಚು ಆದರೆ ಒಣ್ಣ ಸ್ವಲ್ಪ ಹಸರಾಗಿರುತ್ತೆ.

ನೂತನ ಪರಿಶೋಧನೆಗಳು

ಗ್ರೇಟ್‌ಬ್ರಿಟನ್ನು ಹೊಸ ಪರಿಶೋಧನೆಗಳಿಗಾಗಿ ಸಾಮಾನ್ಯ ಕಾಲದಲ್ಲಿ ವರ್ಷಂಪ್ರತಿ ಆರು ಮಿಲಿಯ್ ಪೌಂಡುಗಳನ್ನು ವ್ಯಯ ಮಾಡುವುದು ಸಂಯುಕ್ತ ಅಮೆರಿಕವು ವರ್ಷಂಪ್ರತಿ ಈ ಕಾರ್ಯಕ್ಕಾಗಿ 300 ಮಿಲಿಯ್ ಡಾಲರ್‌ಗಳನ್ನು ಪಯೋಗಿಸುತ್ತದೆ. ಸೋವಿಯಟ್ ರಷ್ಯಾವು ಕೂಡ ಸುಮಾರು 120 ಮಿಲಿಯ್ ರೂಬಲ್ಲುಗಳನ್ನು ವಿಾಸಲಾಗಿಡುತ್ತದೆ. ಈ ವಿಷಯದಲ್ಲಿ ಇಂಡಿಯಾ ದೇಶವು ಈಗ ಕಣ್ಣು ತೆರೆಯುತ್ತಿದೆ. ಈ ಬಾರಿ 6 ಅಥವಾ 7 ಲಕ್ಷ ರೂಪಾಯಿಗಳನ್ನು ವ್ಯಯ ಮಾಡಲಿದೆ. ಈ ಯುದ್ಧದ ಕಾರಣದಿಂದಲಾದರೂ ಭಾರತ ದೇಶವು ಮುಂದುವರಿಯಲೆಂದು ಹಾರೈಸೋಣ.

ಸಂಗೀತ ಕಳಾ

ಲಲಿತ ಕಲೆಗಳಲ್ಲಿ ಸಂಗೀತ ಕಲೆಯು ಶ್ರೇಷ್ಠವಾದದ್ದು ದೇವ ಪೂಜಾಪರಿಗೆ ಅದು ಏಕೈಕ ಭಾಷೆಯು ಜಂತುಗಳು ಕೂಡ ಗಾನಲಹರಿಗೆ ಪಶವಾಗುತ್ತವೆ. ಮನುಷ್ಯರ ಹೃದಯದಲ್ಲಿ ಸದ್ಭಾವನೆಯನ್ನೂ ಜಗತ್ತಿನಲ್ಲಿ ಸಂಘೀಭಾವನೆಯನ್ನು ಸ್ಥಾಪಿಸುವಂಥವು ಲಲಿತ ಕಲೆಗಳು. ಶ್ರೀ ತ್ಯಾಗರಾಜರಂತಹ ಮಹನೀಯರು ಸಂಗೀತ ಕಲೆಗೆ ಮಾಡಿರುವ ಸೇವೆಯು ವರ್ಣನಾತೀತವು. ಇಂಥಾ ಮಹಾಮಹಿಮನ ಮಹೋತ್ಸವವು ಕಳೆದ ತಿಂಗಳಲ್ಲಿ ದಕ್ಷಿಣ ದೇಶದ ಅನೇಕ ಪಟ್ಟಣಗಳಲ್ಲಿ ವಿಜೃಂಭಣೆಯಿಂದ ನಡೆಯಿತು, ಜಾತಿ, ಮತ, ಕುಲ ಭೇದಗಳ ಭಾವವಿಲ್ಲದೆ ಎಲ್ಲರೂ ಒಗ್ಗಟ್ಟಿನಿಂದ, ಒಮ್ಮತದಿಂದ ಸಂತೋಷ ಉತ್ಸಾಹಗಳೊಡನೆ ಈ ಬಗೆಯ ಸೇವೆಗಳನ್ನು ಮಾಡಬೇಕಾದುದ್ದೇ ಧರ್ಮವು.

ಇಂಡಿಯಾದ ಉದ್ಧಾರ

ಇಂಗ್ಲೆಂಡಿನಲ್ಲಿ ತೀವ್ರಗತಿಯಲ್ಲಿರುವ ಇಂಡಿಯಾದ ಹಣದಲ್ಲಿ ಸ್ವಲ್ಪ ಭಾಗವನ್ನು ಈಗ ಕಂಪೆನಿಗಳ ಆಧೀನದಲ್ಲಿರುವ ಭಾರತ ದೇಶದ ಅಯೋ ಮಾರ್ಗಗಳನ್ನು ಕೊಳ್ಳಲು ನಿರ್ಧರಿಸಿರುವುದಾಗಿ ತಿಳಿಯ ಬಂದಿದೆ. ಇದಾದನಂತರವೂ ಇನ್ನೂ 372 ಕೋಟಿಗಳಿರುತ್ತವೆ. ಈ ಹಣವನ್ನು ಭಾರತದಲ್ಲಿ ಭಾರತ ದೇಶೀಯರಲ್ಲದವರ ಅಧೀನದಲ್ಲಿರುವ ಲಾಭದಾಯಕವಾದ ಮಿಲ್ಲುಗಳನ್ನೂ, ಗಣಿಗಳನ್ನೂ, ತೇಎಲೆ ತೋಟ ಮೊದಲಾದುವುಗಳನ್ನೂ ಟ್ರಾಂವೆಗಳನ್ನೂ ವಿದ್ಯುಚ್ಛಕ್ತಿ ವ್ಯವಸ್ಥೆಗಳನ್ನೂ ಟೆಲಿಫೋನ್ ಕಂಪೆನಿಗಳನ್ನೂ ಕೊಳ್ಳಲು ಉಪಯೋಗಿಸಬಹುದು, ಹೀಗೆ ಮಾಡುವದರಿಂದ ಸೊನಿಗಿನ ಬಂಡವಾಳವು ಕಡಿಮೆಯಾದಂತಾಗುವುದು. ಇದಲ್ಲದೆ ಯಾವ ಯಾವ ಸ್ಥಳಗಳಲ್ಲಿ ಯಾವ ಯಾವ ಉತ್ತಮ ಕೈಗಾರಿಕೆದಳನ್ನು ಸ್ಥಾಪಿಸಿದಲ್ಲಿ ಲಾಭದಾಯಕವೋ ಅದನ್ನರಿತು ಸಾಧ್ಯವಾದಷ್ಟು ಹೆಚ್ಚಿನ ರೀತಿಯಲ್ಲಿ ದೇಶವು ಇತರ ದೇಶೀಯರ ಮೇಲೆ ತನ್ನ ದಿನೋಪಯೋಗೀ ಪದಾರ್ಥಗಳಿಗಾಗಿ ಅವಲಂಬನೆ ಮಾಡದ ರೀತಿಯಲ್ಲಿ ಮಾಡುವುದು ಶ್ರೇಯಸ್ಕರವಾಗುತ್ತದೆ.

ಪೋಲಿಷ್ ಬಾಲಕರು

ಹಿಂದೂಸ್ಥಾನವು ಅನ್ನದಾನ ಮಾಡುವುದರಲ್ಲಿ ಹೆಸರುವಾಸಿಯಾದದ್ದು, ತಾನು ಉಪವಾಸವಿದ್ದರೂ ಸರಿ; ಇತರರಿಗೆ ಅನ್ನವಿಲ್ಲವೆನ್ನುವುದಿಲ್ಲ. ಜಾಮ್ ನಗರದಲ್ಲಿ ಪೋಲೆಂಡಿನಿಂದ ಬಾಲಕರನ್ನು ತಂದು ಸಾಕುತ್ತಿರುವರು, ಈ ಬಾಲಕರಿಗೆ ಪೋಲಿಷ್ ಭಾಷೆಯಲ್ಲಿ ವಿದ್ಯಾಭ್ಯಾಭ್ಯಾಸ : ನಡೆ, ನುಡಿ, ವೇಷ, ಭಾಷೆ ಕೂಡಿತ, ಎಂತಾ ಆ ದೇಶದವರಂತೆ ಅಲ್ಲಿಂದಲೇ ಕರೆಸಲ್ಪಟ್ಟಿರುವ ಉಪಾಧ್ಯಾಯರಿಂದ ಪಾಠ ! ಇಂಡಿಯಾದ ಉತ್ಪತ್ತಿಯಿಂದ ಇದರ ಖರ್ಚನ್ನೆಲ್ಲಾ ನವ್ಮ ಸರಕಾರದವರೇ ವಹಿಸುತ್ತಿರುವರು.

ಇಂಡಿಯಾ ಧರ್ಮರಾಜ್ಯವಲ್ಲವೇ ? ಮೊಗಲರು ಇಂಡಿಯಾವನ್ನು ಮುತ್ತಿದರು ಆಗಲೂ ಅವರಿಗೆ ಆಶ್ರಯ, ಫ್ರೆಂಚರು ವ್ಯಾಪಾರಕ್ಕೆ ಬಂದರು ಅವರಿಗೂ ಆಶ್ರಯ. ಈಗ ಆಳುತ್ತಿರುವ ಆಂಗ್ಲೇಯರೂ ವ್ಯಾಪಾರಕ್ಕೆ ಬಂದರು, ಅವರಿಗೂ ಆಶ್ರಯ ಕೊಟ್ಟು ಈಗ ಅವರ ಆಶ್ರಯದಲ್ಲಿ ನಾವು ಸಿಕ್ಕಿನಿದ್ದಿರುವೆವು ನಮ್ಮವರು ದಾನಶೂರ ಕರ್ಣರು !

ಇನ್ನು ಮುಂದೆ ಆಂಗ್ಲೇಯರು ತಮ್ಮ ಸಬ್‌ಮೆರ್ಜಿಗಳಿಗೆ ಹೆಸರನ್ನಿಡುವರು ; ಈ ಮಂವಿಗೆ ನಂಬರುಗಳನ್ನು ಕೊಡುತ್ತಿದ್ದರು.

ವಾಚಕ ಮಹಾಶಯರಲ್ಲಿ ವಿನಂತಿ

ನಾವು ಹೆಚ್ಚು ವಿಷಯಗಳನ್ನು ಪ್ರಕಟಿಸಲು ವರ್ಷಡಿಸಿ ಬಿಡಿ ಪತ್ರಿಕೆಗೆ 3 ಪೈಸೆ ಮೊಡಿರುತ್ತೇವಷ್ಟೆ. ಈ ಸಂದರ್ಭದಲ್ಲಿ ಮುದ್ರಣಾಲಯದ ಸೌಕರ್ಯಗಳೆನ್ನು ಸರಿಪಡಿಸಿಕೊಳ್ಳಬೇಕಾಗಿದ್ದುದರಿಂದ ಆಕೆಸ್ಮಾತ್ ಮಧ್ಯೆ ಒಂದೆರಡು ಪತ್ರಿಕೆ ಪ್ರಕಟಿಸಲು ಆನಾನುಕೂಲ ಆಯಿತ್ತು.

ವಾಚಕಮಹಾಶಯರು ನಮ್ಮ ಪತ್ರಿಕೆಗೆ ಇನ್ನೂ ಹೆಚ್ಚಾಗಿ ಪ್ರೋತ್ಸಾಹಕೊಟ್ಟು ದೇಶಸೇವೆಯಲ್ಲಿ ನನಗೆ ಹೆಚ್ಚು ಬಂಬಲ ಕೊಡುವರೆಂದು ನಂಬಿದೇವೆ

ರಾಜಧಾನಿಯ ಚಂದಾದಾರರು ನಮ್ಮ ಮತ್ತು ನಮ್ಮ ಏಜೆಂಟರಾದ ಮ|| ಹರಿಯಪ್ಪನವರೊಡನೆಯೂ ಸಹಕರಿಸಿ ನಮ್ಮ ಉದ್ಯಮವು ಸಾಂಗವಾಗಿ ನಡವೆಂತೆ ಸಹಾಯಮಾಡಬೇಕಾಗಿ ಕೋರುತ್ತೇವೆ.

ಭಂಗಾರ ಬೆಳ್ಳಿ ವ್ಯಾಪಾರ

ಬಂಗಾರ	ತೋ॥	ರೂ. 65–8–0
ಬೆಳ್ಳಿ	,,	1–0–6

(ಸ. ಸು) **ಹಣ ದುರುಪಯೋಗ**

ಟಿ ನರಸೀಪುರ ತಾಲ್ಲೂ ತಲಕಾಡು ಹೋಬಳಿ ಪಟೇಲರಾದ ಪುಟ್ಟೇಗೌಡರು 75 ರೂ. ಸರಕಾರದ ಹಣವನ್ನು ದುರುಪಯೋಗಪಡಿಸಿದ್ದಾರೆಂಬ ವಿಚಾರಣೆ ನಡೆಯುತ್ತಿದೆ.

ಫಿನ್‌ಲೆಂಡು, ಜರ್ಮನಿ ಇಟಲಿಗಳನ್ನು ನಿಬ್ಬೆರೆ ತಾನು ರಾಜಿಮಾಡಿಕೊಳ್ಳುತ್ತದೆಂದು ತಿಳಿಯಬರುತ್ತದೆ. ತಿನ್ನಲಿಕ್ಕೆ ಇಲ್ಲದಿರುವುದೇ ಕಾರಣ !

ಇಂಡಿಯನ್ ಸಿಪಾಯಿಗಳು ಸೈಪ್ರಸ್ ದ್ವೀಪದಲ್ಲಿ ವಿಶೇಷವಾಗಿರುತ್ತಾರೆ. ಮುಂದೆ ಆಂಗ್ಲೇಯರು ಜರ್ಮನಿಯ ಮೇಲೆ ಬೇಳಲು ಇಲ್ಲಿಂದಲೇ ವಿಮಾನಗಳನ್ನು ಕಳುಹಿಸುವುದು.

ಆಸ್ಟ್ರೇಲಿಯವು ಇನ್ನೂ ಹೆಚ್ಚಾಗಿ ಸಹಾಯ ಬೇಕೆನ್ನುತ್ತಿರುವುದು ಟೈಮ್ಸ್ ಪತ್ರಿಕೆಯು ಬೇಗನೆ ಕಳುಹಿಸಲಾಗುತ್ತದೆ ಎನ್ನುತ್ತದೆ.

ಕಲ್ಕತ್ತಾದ ಯೂರೋಪಿಯನ್ ಅಸೋಸಿಯೇಷನ್ ಸೊಲ್ಸಲ್ ಅಡ್ವೈಸರ್ ಹುದ್ದೆಯ ಅಧ್ಯಕ್ಷರಾದ ಮಿ|| ಸಿ. ಪಿ. ಲಾವ್‌ಸರ್ಕರವರು ವಾರ್ಷಿಕ ಸಭೆಯಲ್ಲಿ ಭಾಷಣ ಮಾಡುತ್ತಾ, ಯುದ್ಧಕಾಲದಲ್ಲಿ ಹಿಂದೀಯರಿಗೆ ಅಧಿಕಾರ ಒಪ್ಪಿಸುವುದು ಯೋಗ್ಯವಲ್ಲ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದರು.

ಬರುವ ಮಾರ್ಚಿ ತಿಂಗಳಲ್ಲಿ ಪರದೇಶದಿಂದ ಗೋಧಿಬರುವುದೆಂದು ಫುಡ್ ಅಡ್ವೈಸರಿ ಕಮಿಟಿಗೆ ಹೇಳಲಾಗಿರುವರು.

ನಿಮ್ಮ ಊರಿನ ಮೆಚ್ಚಿನ ಚಲನ ಚಿತ್ರ ಮಂದಿರಗಳಲ್ಲಿ ಎದುರುನೋಡಿ

— ಹೆಚ್ ಆರ್. ಜಿ. ಸಿ. ಯವರ —

ಶ್ರೀ ಪಿ ಚ್ಚ ರ್ಸ್

ಗಾಂಧಿಸ್ಕ್ವರ್, ಮೈಸೂರು ಇವರ ಸಂಗೀತರತ್ನ ಆಸ್ಥಾನ ವಿದ್ವಾನ್ ಟಿ. ಚೌಡಯ್ಯನವರು, ಕಲ್ಚರ್ ಕಮೆಡಿಯನ್ ಕೆ ಹಿರಣ್ಣಯ್ಯನವರು ಅಭಿನಯಿಸಿರುವ

ವಾಣಿ or (VIOLINIST)

ಮುಂಗಳೂರು ಗಣಪತಿ, ಸುವರ್ಣಾ ಗಣಾನನ ಬಿರುದುಗಳನ್ನೆ ಉಪಯೋಗಿಸಿ

ಕಿ. ಮಂಜಪ್ಪ, ಬೀಡಿ ಮಾಜೆಂಟ್

ಹಳೇ ಅಗ್ರಹಾರ, ಮೈಸೂರು.

For good printing

Saraswati Printing Press

Lansdowne Buildings, Mysore

Lakshminarasimha Press

Srirampet, Mysore

ಅಪೇಕ್ಷಾದ್

Edited, Printed & published by M. S. Krishna Rao, at the Satyavadi Press. Chamaraja Agrahar, Mysore.

೧ ಗ್ಯಾಲ್ ಪೆಟ್ರೋಲಿಗೆ ೧೧೦೦ ಮೈಲಿಗಳು

ಇನ್ನು ಹತ್ತು ವರ್ಷದಲ್ಲಿ ಒಂದು ಗ್ಯಾಲ್ ಪೆಟ್ರೋಲಿಗೆ ಸಾವಿರಾರು ಮೈಲಿ ಮೋಟಾರು ಗಾಡಿಯನ್ನು ನಡೆಸಬಹುದೆಂದು ಡಾ|| ಪೆಚ್. ಜೆ. ಭಾಭಾ, ಎಫ್. ಆರ್. ಎಸ್.. ರವರು ಹೇಳುತ್ತಾರೆ. ಇವರು ಬೆಂಗಳೂರು ಇಂಡಿಯನ್ ಇನ್‌ಸ್ಟಿಟ್ಯೂಟಿಗೆ ಸೇರಿದವರು, ಹಿಂದೆ ಮೈಸೂರಿನಲ್ಲಿ ವಿದ್ಯಾಭ್ಯಾಸದ ಇಲಾಖಾ ಇನ್‌ಸ್ಪೆಕ್ಟರ್ ಜನರಲ್ಲಾಗಿದ್ದ ಭಾಭಾರವರ ನೊಮ್ಮಕ್ಕಳು. ಇವರಿಗೆ 31 ವರ್ಷ ವಯಸ್ಸಾಗಿದ್ದಾಗಲೇ ರಾಯಲ್ ಸೊಸೈಟಿಗೆ ಚುನಾಯಿತರಾದರು. ಇವರು ಮುಂಬೈ, ಕೇಂಬ್ರಿಡ್ಜ್ ವಿದ್ಯಾಶಾಲೆಗಳಲ್ಲಿ ಓದಿ, ಅನೇಕ ಪದಕಗಳನ್ನು ಪಡೆದಿರುತ್ತಾರೆ. ಇವರನ್ನು ಡಾ || ಸಿ. ವಿ. ರಾಮನ್, ಡಾ || ಬಿರ್‌ಬಲ್ ಸಹಾನಿ,ರವರ ಗುಂಪಿಗೆ ಸೇರಿಸಬಹುದು.

ಯಾರನ್ನು ಬದುಕಿಸಬೇಕು?

ಜಬ್ಬಲ್‌ಪುರದಲ್ಲಿ ಒಂದು ಪಾಠಶಾಲೆಯಲ್ಲಿ ವಿದ್ಯಾರ್ಥಿಗಳ ಚರ್ಚೆ ನಡೆಯಿತು. ಗಾಂಧಿ, ಕ್ರಿಪ್ಸ್, ನಾ, ಸ್ಟಾಲಿನ್, ಚಿಯಂಗ್ ಕೈಷೆಕ್, ಗ್ರೇಟಾ ಗಾರ್ಬೋ, ಹಡಗಿನಲ್ಲಿ ಹೋಗುತ್ತಿರುವಾಗ ಹಡಗು ಮುಳುಗುತ್ತದೆ. ಇದರಲ್ಲಿ ಒಬ್ಬರನ್ನು ಬದುಕಿಸಲು ಸ್ಥಳವಿದೆ. ಯಾರನ್ನು ರಕ್ಷಿಸಬೇಕು ? ಎಂಬ ವಿಷಯದ ಮೇಲೆ ಚರ್ಚೆ. ಚರ್ಚೆಯು ದೀರ್ಘವಾಗಿ ನಡೆಯಿತು, ಬಿ. ಎ., ಎಂ. ಎ, ಎಲ್‌ಎಲ್. ಬಿ., ಮುಂತಾದ ಪದವೀಧರರು ಭಕಗಂಹಿಸಿದ್ದರು. ಒಂದನೇ ಓಟು ಗಾಂಧಿಜಿಗೂ, ಎರಡನೇದು ಸಿನಿಮಾ ನಟಿ ಗಾರ್ಬೋಗೂ ಒಂದಿತು.

ಸ್ಟಾಂಡರ್ಡ್ ಬಟ್ಟೆ

ಇಂಡಿಯಾದಲ್ಲಿಯ ಸಾಮಾನ್ಯ ಜನರ ಉಪಯೋಗಕ್ಕಾಗಿ ಅಗ್ಗವಾದ ಒಟ್ಟೆಯು ತಯಾರಾಗುತ್ತಲಿದೆ. ವರ್ಷಂಪ್ರತಿ ಒಂದು ಸಾವಿರ ಮಿಲಿಯನ್ ಗಜಗಳಷ್ಟು ಈ ಒಟ್ಟೆಯು ತಯಾರಾಗಬಹುದೆಂದು ಅಂದಾಜು ಮಾಡಲಾಗಿದೆ. ತಯಾರಾದ ಬಟ್ಟೆಯ ಮಾರಾಟದ ಬೆಲೆಯು ಸುಮಾರು ಅಸಲು ಬೆಲೆಯಷ್ಟೇ ಇರುತ್ತದೆ. ಅಂದರೆ ಪೇಟೆಯಲ್ಲಿಯ ಬಟ್ಟೆಯ ಧಾರಣೆಗಿಂತ ಶೇಕಡ 35 ರಿಂದ 40 ರಷ್ಟು ಕಡಿಮೆಯಾಗಿರುತ್ತದೆ,

ವಿವಿಧ ವರ್ತಮಾನ

ಬೆಜವಾಡಾದಲ್ಲಿ ಆಂಧ್ರಸಭೆಯು ನಡೆಯಿತು. ಮುವ್ವತ್ತು ವರ್ಷದಿಂದಲೂ ಆಂಧ್ರ ದೇಶವನ್ನು ಬೇರೆ ಪ್ರಾಂತ್ಯವಾಗಿ ಮಾಡಬೇಕೆಂದು ಕೇಳುತ್ತಿದ್ದರೂ ಇನ್ನೂ ಆಗಿಲ್ಲ. ಆದ್ದರಿಂದ ಇನ್ನೂ ಹೆಚ್ಚಾಗಿ ಒತ್ತಾಯ ಮಾಡಿ ಬೇಗನೆ ಆಂಧ್ರ ದೇಶ ಸ್ಥಾಪನೆ ಮಾಡುವಂತೆ ಎಲ್ಲರೂ ಸಹಾಯ ಮಾಡಬೇಕೆಂದು ತೀರ್ಮಾನ ಮಾಡಲಾಯಿತು,

ಮಿತ್ರ ಸೈನ್ಯಗಳು ಆಫ್ರಿಕಾದ ಫ್ರೆಂಚ್ ಮೊರಾಕ್ಕೋ, ಅಲ್ಜೀರಿಯಾ, ಟ್ಯೂನಿಸ್‌ಗೆ ಒಂದು ನಾಲ್ಕು ತಿಂಗಳಾಯಿತು. ಸನ್ನೇ ವೇಲೆ ಸಭೆಗಳಾದವು. ಈಜಿಪ್ಟಿಗೆ ಕ್ಯಾಸಬ್ಲಾಂಕದ ಕೂಟವೂ ಆಯಿತು ಅಲ್ಲಿ ಮುಂದೆ ಸ್ವರಾಜ್ಯವಂಟೇ ಎಂಬುದು ಇನ್ನೂ ಯಾರ ಬಾಯಲ್ಲೂ ಹೊರಟಿರುವುದಿಲ್ಲ.

ಇದುವರೆಗೆ ರಷ್ಯಾಕ್ಕೆ 5800 ಟ್ಯಾಂಕ್ 4600 ವಿಮಾನಗಳು ಮಿತ್ರಪಕ್ಷದವರು ಕಳುಹಿಸಿರುವರು.

ಲಂಡನ್ನಿನಲ್ಲಿದ್ದ ಹೆನ್ರಿ ಪ್ರತಿಮೆಗೆ ಯಾರೋ ಟಾರ್ ಬಳಿದ್ದು ವಿಕಾರಮಾಡಿರುವರು,

ಈಗ ಕೋಟ್ಯಾಧೀಶ್ವರರೆಲ್ಲರೂ ಸ್ವಡ್‌ಜರ್‌ಲ್ಯಾಂಡಿನಲ್ಲಿ ಅಡಗಿಕೊಂಡಿರುತ್ತಾರೆ. ಇವರ ಸಂಖ್ಯೆಯು ಈಗ 800 ಕ್ಕೆ ಕಮ್ಮಿಯಿಲ್ಲ. ಇವರೆಲ್ಲರ ಲೆಕ್ಕವನ್ನೂ ಮಿಲಿಯ (ಹತ್ತು ಲಕ್ಷ) ರೂಪದಲ್ಲಿ ಲೆಕ್ಕಾದೇನಿ ನಡೆಸುತ್ತಾರೆ.

ಹೊಸಪೇಟೆಯ 22 ಹಳ್ಳಿಗಳಲ್ಲಿ ಬೆಲ್ಲವನ್ನು ಯಾರೂ ತಯಾರುಮಾಡಕೂಡದೆಂದು ಸರ್ಕಾರದ ಆರ್ಡರ್ ಆಗಿದೆ.

ಇಂಡಿಯಾ ಗೌರ್ನಮೆಂಟಿನವರು ಇನ್ನು ಮುಂದೆ ಎಲ್ಲಾ ಇಲಾಖೆಯಲ್ಲೂ ಬ್ಲಾಟಿಂಗ್ ಪೇಪರನ್ನು ಮೂರರಲ್ಲಿ ಒಂದಸೇ ಭಾಗವನ್ನು ಕಮ್ಮಿ ಖರ್ಚು ಮಾಡಬೇಕೆಂದು ಆಜ್ಞೆಮಾಡಿರುತ್ತಾರೆ,

ಈಗ 18 ತಿಂಗಳಿಂದ ರಷ್ಯಾದಲ್ಲಿ ಯುವಕರನ್ನು ವಿಶೇಷವಾಗಿ ಸೈನ್ಯಕ್ಕೆ ಸೇರಿಸಿ ಸೈನ್ಯವನ್ನು ಹೊಸ ರೂಪಿನಲ್ಲಿ ರೂಢಿಸಿದ್ದರಿಂದಲೆ ರಷ್ಯನರಗೆಜಯವಾಗುತ್ತಿರುವದು.

ಆಲ್ಜೀರ್ಸಿನಲ್ಲಿ ಜರ್ಮನರು ಪ್ಯಾರಷೂಟಿನಲ್ಲಿ ಇಳಿದರು. ಇವರೆಲ್ಲರೂ ಕೈಸೆರೆ ಮಾಡಲ್ಪಟ್ಟರು. ಇವರಲ್ಲಿ 17 ಮಂದಿ ಸಿವಿಲ್ ಡ್ರೆಸ್ಸಿನಲ್ಲಿದ್ದರು. ಅವರನ್ನು ಗುಂಡಿನ ಬಾಯಿಗೆ ಕಟ್ಟಿದರು.